# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1064
ಸದಸ್ಯರ ಹೆಸರು : ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 20/08/2025
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಗರ್ ಹುಕುಂಗಾಗಿ ಭೂಮಿ ಪಡೆಯಲು ಇರುವ ಅರ್ಹತೆಗಳೇನು; | ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108(ಎಫ್) ರಡಿ ಅರ್ಹತೆಯ ಕುರಿತು ವಿವರಿಸಲಾಗಿದೆ. |
| ಆ) | ಉತ್ತರ ಕನ್ನಡ ಜಿಲ್ಲೆಯಲ್ಲಿ ಬಗರ್ ಹುಕುಂಗಾಗಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ) | ಜಿಲ್ಲೆಯಲ್ಲಿ ಬಗರ್ ಹುಕುಂಗಾಗಿ ಸಲ್ಲಿಸಿದ ಅರ್ಜಿಗಳಲ್ಲಿ ಬಾಕಿ ಇರುವ ಅರ್ಜಿಗಳಿಗೆ ಜಮೀನು ಮಂಜೂರು ಮಾಡಲು ಕೈಗೊಂಡ ಕ್ರಮಗಳೇನು; | ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಮಾಡುತ್ತಿರುವ ಸಾಗುವಳಿಯನ್ನು ಸಕ್ರಮಗೊಳಿಸುವ ಸಲುವಾಗಿ ನಮೂನೆ-50, 53 ಹಾಗೂ 57ರಲ್ಲಿ ಬಾಕಿ ಇರುವ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಸಲುವಾಗಿ ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 45 ಎಲ್.ಜಿ.ಪಿ. 2023, ದಿನಾಂಕ: 01.12.2023ರಲ್ಲಿ ಸೂಕ್ತ ಮಾರ್ಗಸೂಚಿಗಳನ್ನು ನೀಡಲಾಗಿದೆ. |
| ಈ) | ಜಿಲ್ಲೆಯಲ್ಲಿ ಬಗರ್ ಹುಕುಂಗಾಗಿ ಸಲ್ಲಿಸಿದ ಅರ್ಜಿಗಳಲ್ಲಿ ಭೂಮಿ ಮಂಜೂರು ಮಾಡಿದ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಉ) | ಜಿಲ್ಲೆಯಲ್ಲಿ ಬಗರ್ ಹುಕುಂಗಾಗಿ ಸಲ್ಲಿಸಿದ ಅರ್ಜಿಗಳಲ್ಲಿ ತಿರಸ್ಕೃತ ಅರ್ಜಿಗಳ ಸಂಖ್ಯೆ ಎಷ್ಟು; ತಿರಸ್ಕೃತಕ್ಕೆ ಕಾರಣವೇನು? (ತಾಲ್ಲೂಕುವಾರು ಮಾಹಿತಿ ನೀಡುವುದು) | ಉತ್ತರ ಕನ್ನಡ ಜಿಲ್ಲೆಯಲ್ಲಿ ಬಗರ್ ಹುಕುಂಗಾಗಿ ಸಲ್ಲಿಸಿದ ಅರ್ಜಿಗಳಲ್ಲಿ ತಿರಸ್ಕೃತ ಅರ್ಜಿಗಳ ಸಂಖ್ಯೆ: 3025.<br><br>ಈ ಕೆಳಕಂಡ ಕಾರಣಗಳಿಂದ ಸದರಿ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.<br><br>1. ಕರ್ನಾಟಕ ಭೂಕಂದಾಯ ಅಧಿನಿಯಮ - 1964 ರ ಕಲಂ 94 ರಡಿ ವಿಧಿಸಿದ ಮಾನದಂಡಗಳು ಪೂರ್ಣಗೊಳ್ಳದ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.<br>2. ಅರ್ಹತಾ ದಿನಾಂಕದಂದು ಅರ್ಜಿದಾರರ ವಯಸ್ಸು 18 ವರ್ಷಕ್ಕಿಂತ ಕಡಿಮೆ ಇದ್ದಲ್ಲಿ,<br>3. ಅರ್ಜಿದಾರ ಮತ್ತು ಅವರ ಕುಟುಂಬವು 4 ಎಕರೆ 38 ಗುಂಟೆ ಗಿಂತ ಹೆಚ್ಚಿನ D ಕ್ಲಾಸ್ ಜಮೀನು ಹೊಂದಿದ್ದರೆ,<br>4. ಅತಿಕ್ರಮಣಗೊಂಡ ಭೂಮಿ ನಗರ ಮಿತಿಯ |

| | | | |
|---|---|---|---|
| | | | ಬಫರ್ ವಲಯದೊಳಗೆ ಬರುತ್ತಿದ್ದರೆ.<br>5. ಗ್ರಾಮದಲ್ಲಿ ಸಾಕಷ್ಟು ಗೋಮಾಳ ಭೂಮಿ ಲಭ್ಯವಿಲ್ಲದೇ ಇದ್ದಲ್ಲಿ,<br>6. ಅರ್ಜಿದಾರರು ತಾಲ್ಲೂಕು/ಪಕ್ಕದ ತಾಲ್ಲೂಕಿನಲ್ಲಿ ಖಾಯಂ ನಿವಾಸಿಯಾಗಿಲ್ಲದಿದ್ದಲ್ಲಿ,<br>7. ಅರ್ಜಿದಾರರು ಭೂಮಿಯನ್ನು ಖುದ್ದಾಗಿ ಸಾಗುವಳಿ ಮಾಡುವ ಸದ್ಭಾವಿಕ ಕೃಷಿಕರಲ್ಲದಿದ್ದಲ್ಲಿ,<br>8. ಅರ್ಜಿದಾರನು ಅನುಭವದಲ್ಲಿ ಇಲ್ಲದಿದಲ್ಲಿ,<br>9. ಅಮೃತ್ ಮಹಲ್ ಕಾವಲ್ ಗೆ ಸೇರಿದ ಜಮೀನಾಗಿದ್ದರೆ, ಭೂಮಿಯು ಕೆರೆ ಅಥವಾ ಕಟ್ಟೆ ಅಥವಾ ಕೋಡಿ ಅಥವಾ ನೈಸರ್ಗಿಕ ಕಾಲುವೆಗಳು ಅಥವಾ ನದಿ ಕಣಿವೆಯ ಹಾದಿಯಲ್ಲಿದ್ದರೆ, |

ಸಂಖ್ಯೆ: ಆರ್‌ಡಿ 142 ಎಲ್‌ಜಿಕ್ಯೂ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

:ಅನುಬಂಧ:

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:940(1064)ರ ಉಪ ಪ್ರಶ್ನೆ ಆ ಕ್ಕೆ ಉತ್ತರಿಸುವ ಕುರಿತು.

ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ-94-ಎ(4) ರಡಿಯಲ್ಲಿ ನಮೂನೆ-57ರ ಅರ್ಜಿಗಳ ಪ್ರಗತಿ ವರದಿ ದಿನಾಂಕ:31-07-2025ರ ಅಂತ್ಯಕ್ಕೆ.

| ಕ್ರ. ಸಂ. | ತಾಲೂಕಿನ ಹೆಸರು | ಸ್ವೀಕರಿಸಿದ ಅರ್ಜಿಗಳ ಸಂಖ್ಯೆ | ಸಕ್ರಮಗೊಳಿಸಿದ ಅರ್ಜಿಗಳ ಸಂಖ್ಯೆ | ತಿರಸ್ಕರಿಸಿದ ಅರ್ಜಿಗಳ ಸಂಖ್ಯೆ | ಒಟ್ಟು ವಿಲೇವಾರಿ | ಬಾಕಿ |
|---|---|---|---|---|---|---|
| 1. | ಕಾರವಾರ | 72 | 05 | 67 | 72 | - |
| 2. | ಹಳಿಯಾಳ | 462 | - | 440 | 440 | 22 |
| 3 | ಜೋಯಿಡಾ | 676 | 46 | 312 | 358 | 318 |
| 4 | ದಾಂಡೇಲಿ | 45 | - | 37 | 37 | 08 |
| 5 | ಕುಮಟಾ | 575 | 24 | 210 | 234 | 341 |
| 6. | ಅಂಕೋಲಾ | 441 | 21 | 396 | 417 | 24 |
| 7 | ಭಟ್ಕಳ | 634 | - | 581 | 581 | 53 |
| 8 | ಹೊನ್ನಾವರ | 356 | 03 | 338 | 341 | 15 |
| 9 | ಶಿರಸಿ | 1060 | 60 | 405 | 465 | 595 |
| 10 | ಸಿದ್ದಾಪುರ | 115 | 10 | 105 | 115 | - |
| 11. | ಯಲ್ಲಾಪುರ | 35 | 05 | 30 | 35 | - |
| 12. | ಮುಂಡಗೋಡ | 371 | 86 | 104 | 190 | 181 |
| | **ಒಟ್ಟು** | **4842** | **260** | **3025** | **3285** | **1557** |

ಹೆಚ್ಚುವರಿ ಆಯುಕ್ತರು,
ಪ್ರಾದೇಶಿಕ ಆಯುಕ್ತರ ಕಾರ್ಯಾಲಯ
ಬೆಳಗಾವಿ ವಿಭಾಗ, ಬೆಳಗಾವಿ

13/8